**(ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಆರ್ ಪಿ ಸಿ ವಕೀಲರಿಂದ**

ದಿನಾಂಕ 25-9-2025 ರಂದು ಆದಂತಹ ಆದೇಶದ ಮೇರೆಗೆ ನಾನು ಮತ್ತೊಮ್ಮೆ ಹುಕ್ಕೇರಿ ತಾಲೂಕಿನ ಕರಗುಪ್ಪಿ ಗ್ರಾಮದ ಬ್ಲಾಕ ನಂ. 482, 483 ಹಾಗೂ 484 ರ ಜಮೀನುಗಳನ್ನು ವಾದಿ ಮತ್ತು ಪ್ರತಿವಾದಿಯರಿಗೆ ಮುಂಚಿತವಾಗಿ ಅಳತೆ ದಿನಾಂಕವನ್ನು ಅಂಚೆ ಮುಖಾಂತರ ತಿಳಿಸಿ, ನ್ಯಾಯಾಲಯದ ಆದೇಶದ ಮೇರೆಗೆ ನ್ಯಾಯಾಲಯ ನಿಗದಿ ಮಾಡಿದ ದಿನಾಂಕ 9-10-2025 ರಂದು ಸದರಿ ಜಮಿನುಗಳಿಗೆ ಭೇಟಿ ಕೊಟ್ಟು ಮೂಲ ದಾಖಲೆಗಳಾದ ಪಿಟಿ ಶೀಟ ಹಾಗೂ ಆಕಾರ ಬಂದ ಹಾಗೂ ಕೆ ಡಿ ಟಿ ( ಖಾಯಂ ದರ ತಖ್ತೆ ) ಹಾಗೂ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಉಭಯ ಪಕ್ಷಗಾರರ ಸಮಕ್ಷಮ ಅಳತ ಕಾರ್ಯ ಪೂರೈಸಿರುತ್ತೇನೆ. ಲಾಗು ಹಿಸ್ಸೆದಾರರಾದ 484 ಮಾರುತಿ ಗೂಳಪ್ಪ ಯಮಕನಮರಡಿ ಹಾಗೂ 485 - ಶಂಕರ ಸಿದ್ದಪ್ಪ ಗುತ್ತಿ ಹಾಗೂ ಸರ್ವೆ ನಂ. 51/1 ಹಾಗೂ 51/2 ರ ಮೀನಾಕ್ಷಿ ಶಾಂತೇಶಕುಮಾರ ಮೂಡಲಗಿ ಹಾಗೂ ವಾದಿಯಾದ ಶಾಂತೇಶಕುಮಾರ ಮೂಡಲಗಿ ಹಾಗೂ ಪ್ರತಿವಾದಿಗಳಾದ ಬಾಳಪ್ಪ ಸಣ್ಣಪ್ಪಯ್ಯ ಯಮಕನಮರಡಿ ಹಾಗೂ 2ನೇ ಪ್ರತಿವಾದಿಯಾದ ನಾಗಪ್ಪ ಬಸವಣ್ಣಿ ಯಮಕನಮರಡಿ ವರ ಸಮಕ್ಷಮ ಅಳತೆ ಮಾಡಿ , ಅಳತೆ ಕಾರ್ಯವನ್ನು ವಿಡಿಯೋ ಮತ್ತು ಫೊಟೊ ಸಮೇತ ನ್ಯಾಯಾಲಯಕ್ಕೆ ಈ ದಿನ ಹಾಜರ ಮಾಡಿರುತ್ತೇನೆ. ಸದರಿ ವರದಿ ಹಾಗೂ ಉಭಯ ಪಕ್ಷಗಾರರಿಗೆ ಕೊಟ್ಟ ನೋಟಿಸನ್ನು ನಿ.ಪಿ-6 ಎಂದು , ಹಾಗೂ ಸ್ಥಳದಲ್ಲಿ ಕೊಟ್ಟಂತಹ ಜವಾಬು ನಿ.ಪಿ-7 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು, ಪಂಚನಾಮೆಯನ್ನು ನಿ.ಪಿ-8 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು, ಸರ್ವೆ ನಂ. 482, 483, 485/1 ಇವುಗಳ 2025-26 ನೇ ಸಾಲಿನ ಆರ್ ಟಿಸಿಗಳನ್ನು ನಿ.ಪಿ-9 , ನಿ.ಪಿ-10, ನಿ.ಪಿ-11 ಎಂದು, ಆಕಾರ ಬಂದ ನಿ.ಪಿ-12 ಎಂದು, ಕೆ ಡಿ ಟಿಯನ್ನು ನಿ.ಪಿ-13 ಎಂದು, ಟಿಪ್ಪಣಿಗಳನ್ನು ನಿ.ಪಿ-14 ರಿಂದ ನಿ.ಪಿ-17 ಎಂದು, ಹಾಗೂ ಕ್ಯೂಜಿ ಐಎಸ್ (ಜಿಯೋಗ್ರಾಫಿಕಲ ಇನಫಾರ್ಮೇಶನ ಸಿಸ್ಟಮ) ನಲ್ಲಿ ತೆಗೆದಂತಹ ಗ್ರಾಮ ನಕಾಶೆಯನ್ನು ನಿ.ಪಿ-18 ಎಂದು, ಮೂಲ ಪಿಟಿ ಶೀಟನ್ನು ನಿ.ಪಿ-19 ಎಂದು, ಹಾಗೂ ಸ್ಥಳದಲ್ಲಿ ತೆಗೆದ ಫೊಟೊಗಳನ್ನು ನಿ.ಪಿ-20 ರಿಂದ ನಿ.ಪಿ-27 ಎಂದು, ಹಾಗೂ ಫೊಟೊ ಮತ್ತು ವಿಡಿಯೋ ಮಾಡಿದ ಪೆನ್ ಡ್ರೈವಗಳನ್ನು ನಿ.ಪಿ-28 ಎಂದು, ನಾನು ಕೊಟ್ಟಂತಹ ವರದಿಯನ್ನು ನಿ.ಪಿ-29 ಎಂದು ಗುರುತಿಸಲಾಯಿತು.

ಈಗ ಅಳತೆ ಮಾಡಿ ನೋಡಿದ ಪ್ರಕಾರ ವದಿ ಶಾಂತೇಕುಮಾರ ಲಕ್ಕಪ್ಪ ಮೂಡಲಗಿ ಇವರ ಜಮೀನಿನ ಪಶ್ಚಿಮ ಬಾಜು ಇರುವ ಪ್ರತಿವಾದಿಗಳಾದ ಬಾಳಪ್ಪ ಯಮಕನಮರಡಿ ಮತ್ತು ನಾಗಪ್ಪ ಯಮಕನಮರಡಿ ಇವರುಗಳು ಬ್ಲಾಕ ನಂ. 483 ರ ವಾದಿ ಜಮೀನನ್ನು 482 ರ ಜಮೀನಿನ ಪ್ರತಿವಾದಿಗಳು 1 ಗುಂಟೆ ಜಮೀನನ್ನು ಒತ್ತುವರಿ ಮಾಡಿದ ಬಗ್ಗೆ ಕಂಡು ಬಂದಿರುತ್ತದೆ. ಅತಿಕ್ರಮಣ ಆದ ಜಮೀನನ್ನು ನೀಲಿ ಬಣ್ಣದಿಂದ ತ್ರಿಕೋಣ ಆಕಾರದಲ್ಲಿ ಎ ಬಿ

ಸಿ ಎಂದು ನನ್ನ ವರದಿಯಲ್ಲಿ ತೋರಿಸಿದ್ದೇನೆ. ಅತಿಕ್ರಮಣ ಆದಂನತಹ ಜಮೀನು ಪೂರ್ವ-ಪಶ್ಚಿಮ ಉತ್ತರ ಭಾಗದ ಕಡೆಗೆ 1.5 ಮೀಟರ ಹಾಗೂ ಉತ್ತರ ದಕ್ಷಿಣ 130 ಮೀಟರ್ಸ ತ್ರಿಕೋಣ ಆಕಾರದಲ್ಲಿ ನೀಲಿ ಬಣ್ಣದಿಂದ ತೋರಿಸಿದೆ. ಎ-ಬಿ 1.5 ಮೀಟರ , ಬಿ-ಸಿ 132 ಮೀಟರ , ಸಿ-ಎ 132 ಮೀಟರ ಇರುತ್ತದೆ. ಅಳತೆ ಖಾತ್ರಿ ಪಡಿಸಿಕೊಳ್ಳಲು ಬ್ಲಾಕ ನಂ. 481 ಹಾಗೂ 485 ನ್ನೂ ಸಹ ಅಳತೆ ಮಾಡಿರುತ್ತೇನೆ.

**ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಬಿ ಎಂ ಜೆ ವಕೀಲರಿಂದ -**

**(ಪ್ರತಿವಾದಿ ಪರ ವಕೀಲರು ವಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**